ಇದ್ರು. ನಾವು ಸಣ್ಣ ನೌಕರಿಗೆ ಹೋದಾಗ ಮಕ್ಕಳಿಗೆ ಸಲುಹಿದಂಗ ಸಲಹುತಿದ್ರು. ಯಾಕನಬೇಕ್ ಅವರಿಗೆ? ಏನು ಕಾರಣ ನಂಗೆ? ಇದು ಒಂದು ಥ್ರಿಲ್ ಅನಸ್ತದೆ ನನಗ ಹೇಳಿಕೊಳ್ಳಿಕ್ಕೆ. ಕಣ್ಣೀರ ಬರುತಾವ–ಇಷ್ಟ ಚಂದದ ರಿಲೇಶನ್ ಕಳಕೊಂಡೀವಿ ಅಂತ.


ಗುರು ನಾವಳ್ಳಿ

◆ **ಈ ಸಂಬಂಧಗಳು ಗಲಭೆಯ ನಂತರ ಬದಲಾದವಾ?**

ಪೊಲೀಸ್ ಆಕ್ಷನ್ ಆದ ನಂತರ ಹಿಂದೂ–ಮುಸ್ಲಿಂ ಜಗಳ ಆತಲ್ಲರಿ. ರಸ್ತೆ ಮೇಲೆ ಮುಸಲ್ಮಾನರು ಹೊಡಕೊಂಡು ಬಡಕೊಂಡು ಹೆಣ ಬಿದ್ದಿದ್ದು ಈ ಕಣ್ಣೀಲೆ ನೋಡಿದ್ದು ಅದ. ಗುಲ್ಬರ್ಗಾದೊಳಗೆ ನಮ್ಮ ಹೈಸ್ಕೂಲ್ ಎದುರ್ರೀ. 8–10 ಮಂದಿ ಟೀಚರ್ಸ್. ಉರ್ದು ಮೀಡಿಯಂ, ಕನ್ನಡ ಮೀಡಿಯಂ ಎರಡೂ ಇತ್ತು. ಆಗ ಗದ್ದಲ ಆತು. ಬಾಗಿಲ ಬಂದ್ ಮಾಡಿಕೊಂಡು ಎಲ್ಲಾ ಮುಸ್ಲಿಂ ಹುಡುಗರಿಗೆ ಹಿಂದಿನ ಸ್ಪೋರ್ಟ್ಸ್‌ದು ಒಂದು ರೂಮ್ ಇತ್ತು. ಅವು ಎಲ್ಲಾ ಒಳಗ ಹಾಕಿ ಟೀಚರ್ಸ್‌ಗಳೆಲ್ಲ ಕೀಲಿ ಹಾಕೊಂಡು ಹೊರಗ ನಿಂತರು. ಅವರು ಅಟ್ಯಾಕ್ ಮಾಡಿದರ ಮಕ್ಕಳು ಸಾಯ್ತಿದ್ದವು. ಧರ್ಮದ ಪಾಲಿಟಿಕ್ಸ್ ಎಷ್ಟು ದುರಂತ ಮಾಡತದ ನೋಡ್ರಿ. ಅರೇ! ನಮ್ಮಂತೆ ಅವರು. ಅವರಂತೇ ನಾವು. ನಮ್ಮ ಜೀವ ತಗೊಂಡರೇನು? ನಾವು ಹೋಗಿ ಅವರ ಜೀವ ತಗೊಂಡರೇನು? ಸಾಯೋದೆಲ್ಲ ಮನುಷ್ಯರೇ ಅಲಾ?

◆ **ನಿಜಾಂ ಆಡಳಿತದಲ್ಲಿ ನೀವು ನೌಕರಿ ಕೂಡ ಮಾಡಿದವರು. ಅದರ ಅನುಭವ ಹೇಗಿತ್ತು?**

ನನ್ನ ಫಸ್ಟ್ ಅಪಾಯಿಂಟ್‌ಮೆಂಟ್ ಒಂದು ಕ್ಲರ್ಕ್ ಪೋಸ್ಟಿಗೆ ಆಯ್ತು. ಪೊಲೀಸ್ ಆಕ್ಷನ್ ಆದ ಮೇಲೆ ನೌಕರಿ ಬಿಡಬೇಕಾಯಿತು. ಆರ್ಥಿಕ ತೊಂದರೆ ಇತ್ತು. ಇಂಟರ್ವ್ಯೂ ಪಾಸಾಗಿದ್ದೆ. ಆಗ ರಾಜೇವಾಡಿ ಅಂತ ಮರಾಠಿ ಸ್ಪೀಕಿಂಗ್ ಮನುಷ್ಯ, ಡೆಪ್ಯುಟಿ ಕಲೆಕ್ಟರ್ ಆಗಿ ಬಂದರು ಅಲ್ಲಿಗೆ. ಮುಂದ ಹೈಕಮಿಶನರ್ ಆಗಿ ಶ್ರೀಲಂಕಾಗೆ ಹೋದರು. ಅವರು ನಮಗ ಇಂಟರ್‌ವ್ಯೂ ತಗೊಂಡರು. ಹೈದರಾಬಾದಿನಿಂದ 500–600 ಹುಡುಗರು ಬಂದಿದ್ದರು. ನನಗಾಗ 18 ವರ್ಷ. ಇಂಗ್ಲಿಷಿನೊಳಗ ಮಾತಾಡಿ ಹೊರಗ ಬಂದೆ. ಅವರು ಸ್ವಲ್ಪ ಹೊತ್ತು ಬಿಟ್ಟು 'ಉಸ್ ಬಚ್ಚೇಕೊ ಬುಲಾವ್' ಅಂದರು. ಸಿಪಾಯಿ ಬಂದು 'ಕಲೆಕ್ಟರ್ ಸಾಹೇಬ್ರು ಕರೀಲಿಕ್ಕೆ ಹತ್ಯಾರ' ಅಂದ. ಗಾಬರಿ ಆತು. ಹೋಗಿ ನಿಂತೆ. ನಿಂದ್ರಾನ ಮರಾಠಿಯೊಳಗ 'ನೌಕರಿ ಬೇಕೇನು ನಿನಗ?' ಅಂದ್ರು. 'ಸಾರ್, ನನಗೆ ಬೇಕೇ ಬೇಕು. ಬಹಳ ಕಷ್ಟಕ್ಕದ. ಒಂದು ಪ್ಯೂನ್ ಜಾಗ ಕೊಟ್ರೂ ಮಾಡಲಿಕ್ಕೆ ತಯಾರದೀನಿ' ಅಂದೆ. ನನಗ ಜಾಯಿಂಟ್ ಡೈರೆಕ್ಟರ್ ಎಜುಕೇಶನ್ ಡಿಪಾರ್ಟ್‌ಮೆಂಟಿನೊಳಗ ಕ್ಲರ್ಕ್ ಅಂತ ಅಪಾಯಿಂಟ್‌ಮೆಂಟ್ ಮಾಡಿದ್ರು. 1949 ಇಸವಿ ಲಾಸ್ಟ್‌ಗೆ ಜಾಯಿನ್ ಆದೆ. ಅಲ್ಲಿ ಜಾಯಿಂಟ್ ಡೈರೆಕ್ಟರ್, ಯೂನಿವರ್ಸಿಟಿ ಪ್ರೊಫೆಸರ್ ಜುಬೇರಿ ಅಂತ ಇದ್ದರು. ಮಸ್ತ್ ಪರ್ಸನಾಲಿಟಿ. ಬಹಳ ಚಂದ ಇದ್ದ ಮನುಷ್ಯ. ಆರ್ಡರ್ ಎದುರಿಟ್ಟೆ. ಹಿಂಗ ನೋಡಿ 'ಕ್ಯೂ ಆಯೆ ಹೋ?' ಅಂದರು. 'ಸಾಹೆಬ್ ಆರ್ಡರ್ ಮಿಲಾ ಹೈ. ಮೇರಿ ಜಗಾ ಕಹಾ ಹೈ?' ಅಂದೆ. ಅಂದ ಕೂಡಲೇನೆ 'ಡೆಪ್ಯುಟಿ ಕಮೀಷನರ್ ಕೆ ಲಿಯೇ?' ಅಂತಂದು ನಗಲಿಕ್ಕೆ